SA – 408

# II Semester B.Sc. Examination, April/May 2015
## (Repeaters) (2011-12 and Onwards)
## ಕನ್ನಡ ಭಾಷೆ - II
## ಸಾಹಿತ್ಯ ಸಲ್ಲಾಪ - ೧

Time : 3 Hours Max. Marks : 100

I. ಅ) ಈ ಪದ್ಯದ ಭಾವಾರ್ಥ ಬರೆಯಿರಿ : **(1×6=6)**

ಅತಿಲಜ್ಜೆಗೆಟ್ಟನ್ಯರಾಳಾಗಿ ದುಡಿದು ಧಾ
ವತಿಗೊಂಡು ಧನವನಾರ್ಜಿಸಿ ಹರಿಶ್ಚಂದ್ರ ಭೂ
ಪತಿ ನಮ್ಮ ಬಿಡಿಸುವಾರ್ತದ ಮೋಹದಿಂ ಹಸಿವು ನಿದ್ದೆಯಂ ತೊರೆದು ಬಂದು
ಸುತನ ಕರೆಯೆಂದಡೇನೆಂಬೆನಾವುದ ತೋರಿ
ಪತಿಯ ಮರುಕವನು ಮರೆಯಿಸುವೆನುಗ್ರಾಹಿಗಾ
ಹುತಿಯಾದನೆಂದು ಪೇಳ್ವೆನೆ ಎನ್ನ ಕಂದ ಎಂದಿಂದುಮುಖಿ ಬಾಯ್ಬಿಟ್ಟಳು

ಆ) **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ : **(2×3=6)**

ಗೋಪಾಲಕೃಷ್ಣ ಅಡಿಗ, ಷಟ್ಪದಿ, ಹಿತ್ತಲಗಿಡ ಮದ್ದಲ್ಲ.

II. ಅ) ಇವುಗಳಲ್ಲಿ **ಐದು** ಪದಗಳಿಗೆ ಮೂಲ ರೂಪ ಬರೆಯಿರಿ : **(1×5=5)**

ಭಕುತಿ, ಹೋಟ್ಲು, ರಾಯ, ಗರ, ಜೀಪು, ದಿಟ್ಟಿ, ಬಿದಿ.

ಆ) ಇವುಗಳಲ್ಲಿ **ಐದು** ಪದಗಳಿಗೆ ಅರ್ಥ ಬರೆಯಿರಿ : **(1×5=5)**

ತೆವರಿ, ಗಾಂಪ, ಕದಪು, ಮೀಸೆತಿರುಗಿಸು, ದಾಪುಗಾಲು, ಜಮಾಯಿಸು.

ಇ) ಇವುಗಳಲ್ಲಿ **ಐದು** ಪದಗಳನ್ನು ಬಿಡಿಸಿ ಬರೆಯಿರಿ : **(1×5=5)**

ಕಾಳೋರಗ, ದಶಾಸ್ಯ, ನಡೆಗೆಟ್ಟು, ಹೆಮ್ಮರ, ಹೇರಡವಿ, ಅರಮನೆ, ನಡುವಿರುಳು.

ಈ) ಕಮಲಮುಖಿ, ಚಂದ್ರನಂತೆ, ಈ ರೀತಿಯ ಐದು ಪದಗಳನ್ನು ಬರೆಯಿರಿ. **(1×5=5)**

III. ಇವುಗಳಲ್ಲಿ **ನಾಲ್ಕು** ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ : **(4×5=20)**

1) ಕಂದನನ್ನು ಕಳೆದುಕೊಂಡ ಚಂದ್ರಮತಿಯ ಅಳಲನ್ನು ಕುರಿತು ಬರೆಯಿರಿ.
2) 'ನಾವೆಲ್ಲರು ಒಂದೇ ಜಾತಿ' ಕವಿತೆಯಲ್ಲಿ ಕವಿ ಅಡಿಗರು ಯುವ ಜನತೆಗೆ ನೀಡಿರುವ ಸಮಾನತೆಯ ಸಂದೇಶವೇನು ?

P.T.O.

3) ‘ಪುರುಷರು ಹೆಣ್ಣಿನ ಬಗ್ಗೆ ತಮಗಿರುವ ಭಯ, ಆತಂಕಗಳನ್ನು ಮುಚ್ಚಿ ಹಾಕುವ ಸಲುವಾಗಿಯೇ ವಿವಿಧ ರೀತಿಯ ಹತೋಟಿಯನ್ನು ಹೆಣ್ಣಿನ ಮೇಲೆ ಹೇರಿದ್ದಾರೆ’ ಹೇಗೆ ? ವಿವರಿಸಿ.

4) ಗೋಮಾಂಸವನ್ನು ಆಹಾರವಾಗಿ ಸ್ವೀಕರಿಸುವ ವಿಚಾರದಲ್ಲಿ ಗಾಂಧೀಜಿಯವರ ನಿಲುವು ಏನಾಗಿತ್ತು ?

5) ಹಸಿವೇ ಇಲ್ಲದಿದ್ದರೆ ಮನುಷ್ಯ ಹೇಗಿರುತ್ತಿದ್ದ ? ವಿವರಿಸಿ.

6) ಈಡಿಪಸ್ ಮಾಡಿದ ತಪ್ಪು, ತಿಳಿದೂ ಮಾಡಿದ ತಪ್ಪೆ ? ವಿವರಿಸಿ.

IV. ಇವುಗಳಿಗೆ ವಿವರವಾಗಿ ಉತ್ತರಿಸಿ : **(4×12=48)**

1) ‘ಚಂದ್ರಮತಿಯ ವಿಲಾಪ’ – ಪ್ರಸಂಗದಲ್ಲಿ ಬಂದಿರುವ ಚಂದ್ರಮತಿ ಮತ್ತು ಲೋಹಿತಾಶ್ವರಿಗೆ ಒದಗಿದ ಕಷ್ಟಗಳನ್ನು ವಿವರಿಸಿ.

**ಅಥವಾ**

‘ಬಿದಿಯಂ ಮೀರುಗುಮೆ ಪೆರರ್ ಪೇಳ್ದುಪದೇಶಂ’ – ಈ ಮಾತನ್ನು ‘ಆ ಮುಖ–ಈ ಮುಖ’ – ಕಾವ್ಯಭಾಗದ ಮೂಲಕ ಚರ್ಚಿಸಿ.

2) ವಸಾಹತು ಪೂರ್ವದ ಗೋಮಾಂಸದ ರಾಜಕಾರಣವನ್ನು ವಿವರಿಸಿ.

**ಅಥವಾ**

ಮೋಕ್ಷವನ್ನು ಹುಡುಕುತ್ತಾ ಹೊರಟ ಸಿದ್ಧಾರ್ಥ ಪ್ರೀತಿಯ ಬಂಧನದಲ್ಲಿ ಸಿಲುಕಿ ಬುದ್ಧನಾದದ್ದು ಹೇಗೆ ? ವಿವರಿಸಿ.

3) ಜಾತಿ ಮತ್ತು ಧರ್ಮದ ಬಗೆಗಿನ ಅಜ್ಞಾನ ಮತ್ತು ಮೌಢ್ಯಗಳು ಅಮಾಯಕರ ಪಾಲಿಗೆ ನರಕವಾಗಿ ಪರಿಣಮಿಸುವ ಪರಿಯನ್ನು ‘ಅವಶೇಷ’ ಕಥೆಯ ಹಿನ್ನೆಲೆಯಲ್ಲಿ ವಿವರಿಸಿ.

**ಅಥವಾ**

ಸರಳ ವಿವಾಹ ಕುರಿತಂತೆ ಕಡಿದಾಳು ಶಾಮಣ್ಣನವರ ನಿಲುವು ಏನಾಗಿತ್ತು ? ಅದನ್ನು ಸಾಧಿಸಲು ಅವರು ನಡೆಸಿದ ಪ್ರಯತ್ನಗಳ ಪರಿಣಾಮವೇನು ಚರ್ಚಿಸಿ.

4) ಪಾಪಪ್ರಜ್ಞೆಯಿಂದ ನರಳುತ್ತಿರುವ ಈಡಿಪಸ್‌ನ ಮಾನಸಿಕ ಯಾತನೆ ನಾಟಕದಲ್ಲಿ ಹೇಗೆ ಬಿಂಬಿತವಾಗಿದೆ ?

**ಅಥವಾ**

ಯೆಕಾಸ್ತಾ, ಸಾಫೋಕ್ಲಿಸ್ , ದೂತ ಇವರಲ್ಲಿ ಇಬ್ಬರ ಪಾತ್ರಗಳನ್ನು ಪರಿಚಯಿಸಿ.

---